ಈ ಹಿಂದೆ 2002ನೇ ಸಾಲಿನ ಬೇಸಿಗೆಯಲ್ಲಿ ಬೆಳಗಾಂ ಜಿಲ್ಲೆಯ ಹಿರಣ್ಯಕೇಶಿ ನದಿಯನ್ನು ಅವಲಂಬಿಸಿರುವ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದ್ದು, ಆಗಿನ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಮಹಾರಾಷ್ಟ್ರ ಸರ್ಕಾರವನ್ನು ವಿನಂತಿಸಿ ದಿನಾಂಕ 7–3–2002 ರಿಂದ 26–5–2002 ರ ವರೆಗಿನ ಅವಧಿಯಲ್ಲಿ ಚಿತ್ರಿ ಡ್ಯಾಮ್ ನಿಂದ ಹಿರಣ್ಯಕೇಶಿ ನದಿಯಲ್ಲಿ ಕುಡಿಯುವ ನೀರಿನ ಅಭಾವ ಪರಿಹಾರಕ್ಕಾಗಿ 104 ಎಂ ಸಿ ಎಫ್ ಟಿ ಯಷ್ಟು ನೀರನ್ನು ಪಡೆಯಲಾಗಿದ್ದು, ಈ ನೀರಿನ ಪರಿಮಾಣಕ್ಕೆ ಮಹಾರಾಷ್ಟ್ರ ಸರ್ಕಾರಕ್ಕೆ ಕರಾಕರಣೆಯನ್ನು ಸಹ ಪಾವತಿಸಲಾಗಿರುತ್ತದೆ

ದಿನಾಂಕ 20 ಫೆಬ್ರವರಿ 2007ರಂದು ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಸಚಿವರೇ ಖುದ್ದಾಗಿ ಮುಂಬಯಿಗೆ ಭೇಟಿ ನೀಡಿ ಮಹಾರಾಷ್ಟ್ರದ ನೀರಾವರಿ ಸಚಿವರೊಂದಿಗೆ ಚಿತ್ರಿ ಅಣೆಕಟ್ಟಿನ ಎತ್ತರವನ್ನು ಎತ್ತರಿಸುವ ಪ್ರಸ್ತಾವನೆ ಕುರಿತು ಹಾಗೂ ಬೇಸಿಗೆ ತಿಂಗಳುಗಳಲ್ಲಿ ನೀರನ್ನು ಬಿಡಿಸಿಕೊಳ್ಳುವ ಬಗ್ಗೆ ಕೂಡ ಚರ್ಚಿಸಲು ಉದ್ದೇಶಿಸಲಾಗಿದೆ

853 ಶ್ರೀ ದಿನೇಶ್ ಗುಂಡೂರಾವ್ . ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಾಂಧಿನಗರ ವಿಧಾನಸಭಾ ಕ್ಷೇತ್ರದ ಲಕ್ಷ್ಮಣಪುರಿ ರೈಲ್ವೆ ಜಮೀನಿನಲ್ಲಿ ಇರುವ ಮನೆಗಳ ಸಂಖ್ಯೆ ಎಷ್ಟು,

ಆ) ಈ ಮನೆಗಳನ್ನು ತೆರವುಗೊಳಿಸಲು ರೈಲ್ವೆ ಇಲಾಖೆ ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಈ ನಿವಾಸಿಗಳ ಪುನರ್ವಸತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) 964

ಆ) ಹೌದು

ಈ ಕುಟುಂಬಗಳ ಪೈಕಿ ಬೆಂಗಳೂರು–ಚೆನ್ನೈ ರೈಲ್ವೆ ಹಳಿ ಪಕ್ಕದಲ್ಲಿ ಬರುವ 372 ಕುಟುಂಬಗಳನ್ನು ಗುರುತಿಸಲಾಗಿದ್ದು ಈ ಕುಟುಂಬಗಳನ್ನು ಬೆಂಗಳೂರು ನಗರದ ಆನೇಕಲ್ಲು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೂಡ್ಲೂ ಗ್ರಾಮ ಸರ್ವೆ ನಂ 148 ರಲ್ಲಿನ ಮಂಡಳಿ ಜಾಗಕ್ಕೆ ಸ್ಥಳಾಂತರಿಸಲು ಉದ್ದೇಶಿಸಿದೆ

ಇ) ಕೂಡ್ಲೂ ಗ್ರಾಮ ಸರ್ವೆ ನಂ 148 ರಲ್ಲಿನ ಮಂಡಳಿ ಜಾಗದಲ್ಲಿ JNNURM ಯೋಜನೆಯಡಿಯಲ್ಲಿ 3000 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು, ಈ ಮನೆಗಳ ನಿರ್ಮಾಣದ ನಂತರ ಚೆನ್ನೈ–ಬೆಂಗಳೂರು ರೈಲ್ವೆ ಹಳಿ ಪಕ್ಕದಲ್ಲಿರುವ ಲಕ್ಷ್ಮಣಪುರಿ ಕೊಳಚೆ ಪ್ರದೇಶದ 372 ಕುಟುಂಬಗಳನ್ನು ಸ್ಥಳಾಂತರಿಸಿ ಪುನರ್ ವಸತಿ ಸೌಕರ್ಯ ಕಲ್ಪಿಸಲಾಗುವುದು

371 ಶ್ರೀ ಕುಮಾರ್ ಬಂಗಾರಪ್ಪ ಎಸ್ (ಸೊರಬ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?–

ಅ) 2004–05 ಮತ್ತು 2006–07 ನೇ ಸಾಲಿನಲ್ಲಿ ಸೊರಬ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ರಿಪೇರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ,

ಆ) ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ ಪರಿಹಾರಕ್ಕೆ ಯಾವ ಯಾವ ಶೀರ್ಷಿಕೆ ಅಡಿ ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಸೊರಬ ತಾಲ್ಲೂಕಿನ ಜಿಲ್ಲಾ ಪಂಚಾಯತ್‌ನ ರಸ್ತೆಗಳ ರಿಪೇರಿಗಾಗಿ ಈ ಕೆಳಗಿನಂತೆ ಹಣ ಬಿಡುಗಡೆ ಮಾಡಲಾಗಿರುತ್ತದೆ

(ರೂ ಲಕ್ಷಗಳಲ್ಲಿ)

ಯೋಜನೆ	2004–05ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	2006–07ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ
ಲೆಕ್ಕಶೀರ್ಷಿಕೆ 3054	37 21	82 21
ಲೆಕ್ಕ ಶೀರ್ಷಿಕೆ–5054	4 00	14 31
12ನೇ ಹಣಕಾಸು ಆಯೋಗ	–	110 17
ಒಟ್ಟು	41 21	206 69

ಆ) ಸೊರಬ ತಾಲ್ಲೂಕಿನಲ್ಲಿ 84 ಜನ ವಸತಿಗಳಲ್ಲಿ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಈ ಜನವಸತಿಗಳಲ್ಲಿ ರೂ 69 062 ಲಕ್ಷ ಮೊತ್ತದ ಕುಡಿಯುವ ನೀರಿನ ಕಾಮಗಾರಿಗಳನ್ನು